# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 12/6/2020

### ಜಾಗತಿಕ ಮಟ್ಟದಲ್ಲಿ 4ನೇ ಸ್ಥಾನಕ್ಕೆ ಭಾರತ

ನವದೆಹಲಿ: ಕೊರೊನಾವೈರಸ್ ಪ್ರಕರಣಗಳ ಲೆಕ್ಕಾಚಾರದಲ್ಲಿ ಭಾರತವೀಗ 3 ಲಕ್ಷದ ಹತ್ತಿರಕ್ಕೆ ಬಂದು ನಿಂತಿದೆ. ಅಷ್ಟೇ ಅಲ್ಲ, ಜಗತ್ತಿನಲ್ಲೇ ನಾಲ್ಕನೇ ಸ್ಥಾನಕ್ಕೆ ಹೋಗಿರುವ ಭಾರತ, ಗುರುವಾರವೇ ಸ್ಪೇನ್ ಮತ್ತು ಯುನೈಟೆಡ್ ಕಿಂಗ್‌ಡಮ್ ಅನ್ನು ಹಿಂದಕ್ಕೆ ಹಾಕಿದೆ.

ಸದ್ಯ ಅಮೆರಿಕ ಟಾಪ್‌ನಲ್ಲಿದ್ದು ಇಲ್ಲಿ 20.71 ಲಕ್ಷ ಕೇಸುಗಳಿವೆ. ಬ್ರೆಜಿಲ್ 2 ಸ್ಥಾನದಲ್ಲಿದ್ದು 7.75 ಲಕ್ಷ ಕೇಸುಗಳು, ರಷ್ಯಾದಲ್ಲಿ 5.02 ಲಕ್ಷ ಪ್ರಕರಣಗಳಿವೆ. ಇವನ್ನು ಬಿಟ್ಟರೆ ಭಾರತವೇ ನಾಲ್ಕನೇ ಸ್ಥಾನದಲ್ಲಿದೆ. ಗುರುವಾರ ರಾತ್ರಿ ವೇಳೆಗೆ ಭಾರತದಲ್ಲಿನ ಒಟ್ಟಾರೆ ಸೋಂಕಿತರ ಸಂಖ್ಯೆ 2.97 ಲಕ್ಷ. ಇದರಲ್ಲಿ ಮಹಾರಾಷ್ಟ್ರದ್ದೇ ಸಿಂಹಪಾಲು. ಈ ರಾಜ್ಯವೊಂದರಲ್ಲೇ 97 ಸಾವಿರ ಪ್ರಕರಣಗಳು ದಾಖಲಾಗಿವೆ. ತಮಿಳುನಾಡು 2ನೇ ಸ್ಥಾನದಲ್ಲಿದ್ದು 38 ಸಾವಿರ, ದೆಹಲಿಯಲ್ಲಿ 34 ಸಾವಿರ, ಗುಜರಾತ್‌ನಲ್ಲಿ 22 ಸಾವಿರ ಪ್ರಕರಣಗಳು ಕಾಣಿಸಿಕೊಂಡಿವೆ.